Construction of E. S. I. Hospital at Davangere Town

901. SRI PAMPAPATHI (Davanagere).—will the Minister for Labour and Excise be pleased to state:—

(a) whether there is a proposal to construct E. S. I. Hospital in Davanagere City; if so, the reason for the delay in constructing the hospital;

(b) the bed strength of the proposed hospital ;

(c) the number of E. S. I. cardholders in Davanagere City and the total number of their family members;

(d) whether this hospital has been started keeping in view the number of members covered under the E. S. I. Scheme; if so, their number;

(e) whether the staff to the hosiptal would be appointed commensurate with the said number

(f) the action taken for appointing the staff which is inade quate.

(g) whether any complaints have been received by Government regarding shortage of medicines in the E. S. I. Hospitals; if so, the action taken ?

SRI R. S. PATIL (Minister for Labour and Excise). —

(a) Yes. The question of site has not been settled

(b) 50 (Fifty)

(c) 12,200 card holders
48,800 family members

(d) Yes. Four beds for every one thousand employees

(e) Yes

(f) Does not arise

(g) No.

ಶ್ರೀ ಪಂಪಾಪತಿ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ನಿವೇಶನದ ಪ್ರಶ್ನೆ ಇತ್ಯರ್ಥವಾಗಿಲ್ಲ ಎಂದು ಹೇಳುತ್ತಿದ್ದೀರಿ. ಹತ್ತು ವರ್ಷಗಳಿಂದ ಈ ಪ್ರಶ್ನೆ ಇತ್ಯರ್ಥವಾಗಿಲ್ಲ. ಕಾರಣ ಏನು ? ಆ ಇ.ಎಸ್. ಐ. ಆಸ್ಪತ್ರೆಯನ್ನು ಕಟ್ಟುವುದಕ್ಕೆ ಬೇಕಾದ ಜಾಗ ಸಿಕ್ಕಲಿಲ್ಲವೆ? ಅಥವಾ ಆಸ್ಪತ್ರೆ ಕಟ್ಟುವುದಕ್ಕೆ ಜಾಗ ಕೊಡುವುದಿಲ್ಲವೆಂದು ಯಾರಾದರೂ ಹೇಳುತ್ತಿರುವರೆ? ಅಥವಾ ಹಣದ ಕೊರತೆ ಏನಾದರೂ ಇದೆಯೇ ? ಅಥವಾ ನಮ್ಮ ಸರ್ಕಾರದವರಿಗೆ ಆಸ್ಪತ್ರೆ ಕಟ್ಟಬಾರದು ಎನ್ನುವ ಇಚ್ಛೆಯೇನಾದರೂ ಇದೆಯೇ ? ವಿತಕ್ಕೋಸ್ಕರ ಇದು ಇತ್ಯಾರ್ಥವಾಗಿಲ್ಲ ? ದಯವಿಟ್ಟು ತಿಳಿಸುತ್ತೀರಾ ?

†ಶ್ರೀ ಆರ್. ಎಸ್. ಪಾಟೀಲ್.—ಇದು ಹತ್ತು ವರ್ಷಗಳಿಂದ ಹಿಂದೆ ಬಿದ್ದದೆ. ಈ ವಿಷಯ ತಮಗೆ ಗೊತ್ತಿದೆ. ಮೋತಿ ವೀರಣ್ಣನವರು ಆ ಜಾಗಾ ಕೊಡುವುದಕ್ಕೆ ಒಪ್ಪುತ್ತಾ ಇಲ್ಲ. ಈ ಬಗ್ಗೆ ೮ ವರ್ಷ ಗಳಿಂದ ಕಾಗದಪತ್ರಗಳು ರಿವನಲ್ ಬೋರ್ಡಿಗೂ ಕಾರ್ಪೊರೇಷನ್‌ಗೂ ಓಡಾಡುತ್ತಿವೆ. ಇತೀಚಿಗೆ

ಆಕಲಗಡ್ ಎನ್ನುವವರಿಗೆ ಸಂಬಂಧಪಟ್ಟ ೮ ಎಕರೆ ಜಾಗವನ್ನು ನಾವು ನೋಡಿದ್ದೇವೆ. ಡೈರೆಕ್ಟರ್ ಆಫ್ ಮೆಡೀಲ್ ಸರ್ವಿಸ್ ಹಾಗೂ ನಾನು ಹಾಗೂ ಪುಂಪಾಪತಿಯವರು ಹೀಗೆ ನೋಡಿಕೊಂಡು ಬಂದಿದ್ದೇವೆ. ರಿಜನಲ್ ಬೋರ್ಡ್ ಹಾಗೂ ಕಾರ್ಪೊರೇಷನ್ ಅವರ ಒಪ್ಪಿಗೆ ಪತ್ರ ನಂತರ ಈ ಆಸ್ಪತ್ರೆಯನ್ನು ಕೈಗೆ ತೆಗೆದುಕೊಳ್ಳುತ್ತೇವೆ. ಅಲ್ಲಿ ಆಸ್ಪತ್ರೆಯನ್ನು ಕಟ್ಟಿಸಬಾರದು ಎಂಬ ಉದ್ದೇಶ ಸರ್ಕಾರಕ್ಕೆ ಇಲ್ಲ, ಅವಶ್ಯವಾಗಿ ಅಲ್ಲಿ ಆಸ್ಪತ್ರೆ ಆಗಬೇಕು. ಆದಷ್ಟು ಬೇಗ ಆಸ್ಪತ್ರೆಯನ್ನು ಮಾಡಿಕೊಡುತ್ತೇವೆ. ಅಲ್ಲಿರುವ ಮಾಲೀಕರ ಮೇಲೆ ಸ್ವಲ್ಪ ಪ್ರಭಾವ ಬೀರಿ ಅವರ ಖರೀದಿಯ ಬಗ್ಗೆ ಬೇಗ ಇತ್ಯರ್ಥ ಮಾಡಬೇಕು. ಇದನ್ನು ಅದಷ್ಟು ಬೇಗ ಮಾನ್ಯ ಸದಸ್ಯರು ಮಾಡಿಸಿಕೊಟ್ಟರೆ ನಾವು ಆಸ್ಪತ್ರೆಯನ್ನು ಕೈಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.—ಅದಕ್ಕೆ ಬೇಕಾದಂತಹ ಧಾಖಲೆಯೆಲ್ಲಾ ಕೊಡಿಸುತ್ತೇನೆ. ಅವರ ಧಾಖಲೆಯೆಲ್ಲಾ ರೆಡಿಯಾಗಿದೆ. ಇವತ್ತು ರಾತ್ರಿ ಬೇಕಾದರೆ ಆ ಮಾಲೀಕರ ಜೊತೆ ಮಾತ ಡೋಣ. ಆ ಜಮೀನನ್ನು ಕೊಡಿಸಿದರೆ ಇನ್ನು ಎಷ್ಟು ದಿವಸಗಳಲ್ಲಿ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಮಾಡಿಸುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ಕಾರ್ಪೊರೇಷನ್ ಬಂದ ತಕ್ಷಣ ಪ್ಲಾನು, ಎಸ್ಟಿಮೇಟು ಮಾಡಿ ತಮ್ಮನ್ನೇ ಕರೆಸಿಕೊಂಡು ಹೋಗಿ ತಾವು ಯಾರನ್ನು ಹೇಳುತ್ತೀರೋ ಅವರ ಕೈಯ್ಯಲೇ ಶಂಕುಸ್ಥಾಪನೆ ಮಾಡಿಸುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ ಅಲ್ಲಿ ಆಸ್ಪತ್ರೆಯ ಕಾರ್ಡನ್ನು ಹೊಂದಿರುವವರು ೧೨,೨೦೦ ಜನ ಇದ್ದಾರೆ ಕಟ್ಟಾಣಕ್ಕೆ ಸಂಬಂಧಿಸಿದ ಸದಸ್ಯರ ಸಂಖ್ಯೆ ೪೮,೬೦೦ ಇದೆ ಅಲ್ಲಿ ಒಟ್ಟು ೬೦ ಸಾವಿರ ಜನ ಸಂಖ್ಯೆ ಆಯಿತು. ಈಗ ತಾವು ಹೇಳಿದ್ದೀರಿ ೫೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮಾತ್ರ ಈಗ ಕಟ್ಟಿಸುತ್ತೇವೆ ದು ಹೇಳಿದ್ದೀರಿ ಇದರ ಜೊತೆಗೆ ಹರಿಹರವನ್ನು ಸೇರಿಸಿಕೊಂಡರೆ ಅಲ್ಲಿ ೬,೦೦೦ ಕಾರ್ಡನ್ನು ಹೊಂದಿರುವವರು ಇದ್ದಾರೆ. ಕಟ್ಟಾಣಕ್ಕೆ ಸಂಬಂಧಿಸಿದ ಸದಸ್ಯರ ಸಂಖ್ಯೆ ೨೪,೦೦೦ ಇದೆ. ಈ ಎರಡನ್ನೂ ಸೇರಿಸಿದರೆ ಒಟ್ಟು ೯೦,೦೦೦ ಜನಸಂಖ್ಯೆಯಾಗುತ್ತದೆ. ಈ ತೊಂಬತ್ತು ಸಾವಿರ ಜನ ಸಂಖ್ಯೆಗೆ ೫೦ ಹಾಸಿಗೆಗಳುಳ್ಳ ಆಸ್ಪತ್ರೆ ಸಾಕಾಗುವುದಿಲ್ಲ. ಆದ್ದರಿಂದ ತಾವು ಕೊನೇ ಪಕ್ಷ ೧೦೦ ಹಾಸಿಗೆ ಉಳ್ಳಂತಹ ಒಂದು ಆಸ್ಪತ್ರೆಯನ್ನು ಕಟ್ಟುವುವಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಸ್ ಪಾಟೀಲ್.—ಕಾರ್ಡನ್ನು ಹೊಂದಿದ ಕಾರ್ಮಿಕರು ೧೨,೨೦೦ ಜನ ಇದ್ದಾರೆ. ಈಗ ನಾವು ಪ್ರತಿ ಸಾವಿರ ಕಾರ್ಮಿಕರಿಗೆ ನಾಲ್ಕು ಹಾಸಿಗೆಗಳಂತೆ ಲೆಕ್ಕ ಹಾಕಿ ೫೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ಕಟ್ಟುತ್ತಿದ್ದೇವೆ. ಮುಂದೆ ೫೦ ಹಾಸಿಗೆ ಇರುವ ಆಸ್ಪತ್ರೆ ಸಾಕಾಗುವುದಿಲ್ಲ ಎನ್ನುವುದನ್ನು ಸಿದ್ಧ ಮಾಡಿಕೊಟ್ಟರೆ ಹೆಚ್ಚು ಮಾಡೋಣ. ನೀವು ಹರಿಹರದ ಕಾರ್ಮಿಕರನ್ನೂ ಇದಕ್ಕೆ ಲೆಕ್ಕ ಹಾಕಿದ್ದೀರ. ೯ ಮೈಲಿ ದೂರದಿಂದ ಅವರನ್ನು ಏಕೆ ಬರುವಂತೆ ಮಾಡಬೇಕು. ಅವರೇನಾದರೂ ಈ ಬಗ್ಗೆ ಬಂದರೆ ಆಮೇಲೆ ವಿಚಾರ ಮಾಡೋಣ.

ಶ್ರೀ ಪಂಪಾಪತಿ.—ಇ ಎಸ್.ಐ.ನಲ್ಲಿ ಟಿ. ಬಿ. ಖಾಯಿಲೆ ಇರತಕ್ಕಂಥ ರೋಗಿಗೆ ಒಂದು ವರ್ಷ ಕಾಂಪನ್‌ಸೇಷನ್ ಕೊಡುತ್ತೀರಿ. ಟಿ ಬಿ. ಖಾಯಿಲೆಗಿಂತಲೂ ಕ್ಯಾನ್ಸರ್ ಮತ್ತು ಕುಷ್ಠರೋಗ ಬಹಳ ದೊಡ್ಡ ಖಾಯಿಲೆಗಳು. ಅದಕ್ಕೆ ಏನೂ ಪ್ರತ್ಯೇಕವಾದ ವ್ಯವಸ್ಥೆ ಇಲ್ಲ. ಆದುದರಿಂದ ತಾವು ದೊಡ್ಡ ಮನಸ್ಸುಮಾಡಿ ಟಿ ಬಿ. ಖಾಯಿಲೆ ರೋಗಿಗೆ ಒಂದು ವರ್ಷ ರಜಾ ಕೂಟ್ಟು ಕಾಂಪನ್‌ಸೇಷನ್ ಏನು ಕೊಡುತ್ತೀರಿ ಅದೇರೀತಿ ಕುಷ್ಠರೋಗ ಮತ್ತು ಕ್ಯಾನ್ಸರ್ ರೋಗಿಗಳಿಗೆ ಒಂದು ವರ್ಷ ರಜಾ ಕಾಂಪನ್ ಸೆಷನ್ ಕೊಡತಕ್ಕಂಥ ಸೌಲಭ್ಯವನ್ನೇನಾದರೂ ಒದಗಿಸುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ಮಾನ್ಯ ಪಂಪಾಪತಿಯವರಿಗೆ ಗೊತ್ತುಂಟು. ಟಿ. ಬಿ. ರೋಗಿಗಳಿಗೆ ಸ್ಯಾನಿಟೋರಿಯಂ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಅವರ ಶುಶ್ರೂಷೆಯನ್ನು ಮಾಡುವ ವ್ಯವಸ್ಥೆ ಮಾಡಿದ್ದೇವೆ ಅದಕ್ಕೆ ತಗಲತಕ್ಕ ವೆಚ್ಚ ಒಂದು ಪೇಷೆಂಟಿಗೆ ಇಷ್ಟು ರೂಪಾಯಿ ಎಂದು ಇರುತ್ತದೆ, ಅದನ್ನು ಕೊಟ್ಟಮೆಲೆ ಆಡಿಟ್ ಮಾಡಿಕೊಂಡು ಟ್ರೀಟ್‌ಮೆಂಟ್ ಮಾಡುತ್ತಾರೆ ಮತ್ತೆ ಈಗ ತಾವು ಏನು ಪ್ರಶ್ನೆ ಕೇಳಿದ್ದೀರಿ ಅದನ್ನು ಪರಿಶೀಲನೆ ಮಾಡಬೇಕಾಗಿದೆ, ಬಹುಶಃ ಅದು ಕವರ್ ಆಗುವುದಿಲ್ಲ ಎಂದು ನನ್ನ ತಿಳುವಳಿಕೆ.